## ನಿಮ್ಮೊಡನೆ

# ನಕಲಿ ಔಷಧಿಗಳನ್ನು ನಿಯಂತ್ರಿಸಿ

ದೇಶದಲ್ಲಿ ಶೇಕಡಾ 5.1ರಷ್ಟು ಔಷಧಿಗಳು ಗುಣಮಟ್ಟ ಮಾನದಂಡಗಳನ್ನು ಪಾಲಿಸುವಲ್ಲಿ ವಿಫಲವಾಗಿವೆ. ಈ ಸಂಸ್ಥೆಯ ಗುಣಮಟ್ಟ ನಿಯಂತ್ರಣ ಮಾನದಂಡಗಳೂ ಉನ್ನತ ಮಟ್ಟದಲ್ಲಿ ಇಲ್ಲ ಎನ್ನಲಾಗುತ್ತಿದೆ. ಭಾರತದಲ್ಲಿ ಉತ್ಪಾದನೆಗೊಂಡ ಎಷ್ಟೋ ಔಷಧಿಗಳು ವಿದೇಶಗಳಲ್ಲಿ ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾಗುತ್ತಿವೆ.

ಆರೋಗ್ಯ ಕ್ಷೇತ್ರದ್ದು ಬಹುದೊಡ್ಡ ಉದ್ಯಮ. ಕೋಟ್ಯಂತರ ಡಾಲರ್‌ಗಳ ವಹಿವಾಟು. ಎಷ್ಟೇ ನಿಯಂತ್ರಣ ಕ್ರಮಗಳನ್ನು ಕೈಗೊಂಡರೂ ಈ ಕ್ಷೇತ್ರದಲ್ಲಿ ಜನಸಾಮಾನ್ಯರ ಶೋಷಣೆ ಹೆಚ್ಚೇ ಆಗುತ್ತಿದೆ. ಅದರಲ್ಲೂ ನಕಲಿ ಔಷಧಿಗಳದ್ದು ಬಗೆಹರಿಯದ ಸಮಸ್ಯೆ. ವಿಶ್ವ ಆರೋಗ್ಯ ಸಂಸ್ಥೆಯ ಆಶ್ರಯದಲ್ಲಿ ಇತ್ತೀಚೆಗೆ ಸಮೀಕ್ಷೆಯೊಂದು ನಡೆಯಿತು. ಸುಮಾರು 48,000 ಬಗೆಯ ಔಷಧಿಗಳ ಸ್ಯಾಂಪಲ್‌ಗಳನ್ನು ಈ ಸಮೀಕ್ಷೆಯಲ್ಲಿ ಪರೀಕ್ಷಿಸಲಾಯಿತು. ನೋಡಿದರೆ ಅದರಲ್ಲಿ ಶೇಕಡಾ 10ರಷ್ಟು ನಕಲಿ ಔಷಧಿ ಅಥವಾ ಕಳಪೆ ಗುಣಮಟ್ಟದ್ದು! ಅದರಲ್ಲೂ ಹೆಚ್ಚಿನ ನಕಲಿ ಔಷಧಿಗಳು ಮಾರುಕಟ್ಟೆಯಲ್ಲಿ ಬಿಕರಿಯಾಗುತ್ತಿರುವುದು ಕಡಿಮೆ ಆದಾಯದ ಮತ್ತು ಮಧ್ಯಮ ಆದಾಯದ ಜನರು ಇರುವ ದೇಶಗಳಲ್ಲಿ.

ಬಡದೇಶಗಳಲ್ಲಿ ನ್ಯುಮೋನಿಯಾ ಮತ್ತು ಮಲೇರಿಯಾದ ಕಾಟ ಹೆಚ್ಚು. ಇವೆರಡೂ ದಿನಗಟ್ಟಲೆ ಬಿಡದೆ ಕಾಡುವ ಜ್ವರಗಳು. ಬಹುತೇಕ ನಕಲಿ ಔಷಧಿಗಳು ಈ ರೋಗಗಳಿಗೇ ಸಂಬಂಧಿಸಿವೆ. ಬಡ ದೇಶಗಳ ಜನರು ಈ ಕಳಪೆ ಔಷಧಿಗಳಿಂದಾಗಿ ಕಾಯಿಲೆ ಗುಣವಾಗದೆ ದೀರ್ಘ ಕಾಲ ನರಳುತ್ತಾರೆ. ಔಷಧಿ ಕಂಪೆನಿಗಳ ಮಾರುಕಟ್ಟೆ ಹಿಗ್ಗುತ್ತಾ, ಆದಾಯ ಏರುತ್ತಲೇ ಹೋಗುತ್ತದೆ. ಆ್ಯಂಟಿಬಯಾಟಿಕ್, ಕ್ಯಾನ್ಸರ್ ನಿರೋಧಕ ಮತ್ತು ಗರ್ಭ ನಿರೋಧಕ ಮಾತ್ರೆಗಳಲ್ಲೂ ನಕಲಿ ಸಂಖ್ಯೆ ಸಾಕಷ್ಟಿದೆ. ಮಕ್ಕಳ ಕಾಫ್ ಸಿರಪ್‌ಗಳನ್ನು ಆಲೂಗಡ್ಡೆ ಮತ್ತು ಜೋಳದ ಹೊಟ್ಟಿನಿಂದ ತಯಾರಿಸುತ್ತಾರೆ. ವಿಶ್ವದಾದ್ಯಂತ ಪ್ರತಿವರ್ಷ ಮಲೇರಿಯಾ ಮತ್ತು ನ್ಯುಮೋನಿಯಾಗಳಿಗೆ ಒಂದೂವರೆ ಲಕ್ಷ ಮಕ್ಕಳು ಬಲಿಯಾಗುತ್ತಿದ್ದಾರೆ ಎನ್ನುತ್ತಿದೆ ಅಂಕಿ ಅಂಶ. ಅದರಲ್ಲೂ ನಕಲಿ ಔಷಧಿಗಳಿಂದ ಎಷ್ಟು ಮಕ್ಕಳು ಸಾಯುತ್ತಿದ್ದಾರೆ ಎನ್ನುವುದರ ಲೆಕ್ಕ ಸಿಗುತ್ತಿಲ್ಲ. ಆ್ಯಂಟಿಬಯಾಟಿಕ್ ಮಾತ್ರೆಗಳಲ್ಲೂ ನಕಲಿ ಹೆಚ್ಚಿರುವುದು ಬೇರೆ ಯಾವುದೇ ರೋಗಗಳನ್ನು ಎದುರಿಸುವ ಜನರ ಪ್ರತಿರೋಧ ಶಕ್ತಿಯನ್ನು ಕುಂದಿಸುತ್ತದೆ. ಚಿಕಿತ್ಸೆ ಬೇಗ ಮುಗಿಯುವುದೇ ಇಲ್ಲ. ಮಾತ್ರೆಗಳು ನಿರಂತರ ಮಾರಾಟ ಆಗುತ್ತಲೇ ಇರಬೇಕು ಎನ್ನುವುದು ಔಷಧಿ ಕಂಪೆನಿಗಳ ಮಾರುಕಟ್ಟೆ ತಂತ್ರವೂ ಹೌದು. ನಕಲಿ ಮತ್ತು ಕಳಪೆ ಗುಣಮಟ್ಟದ ಔಷಧಿ ವಹಿವಾಟು ವಾರ್ಷಿಕ 300 ಕೋಟಿ ಡಾಲರ್ ದಾಟಿದೆ ಎನ್ನುವುದು ಗಾಬರಿ ಹುಟ್ಟಿಸುವ ಅಂಶ.

ಬಹಳ ಮುಖ್ಯವಾಗಿ ಆಫ್ರಿಕಾ, ಯೂರೋಪ್ ಮತ್ತು ಏಷ್ಯಾ ಉಪಖಂಡದಲ್ಲಿ ನಕಲಿ ಔಷಧಿಗಳ ಹಾವಳಿ ಹೆಚ್ಚು. ಎಷ್ಟೋ ನಕಲಿ ಮಾತ್ರೆಗಳಲ್ಲಿ ಮನುಷ್ಯ ಜೀವಕ್ಕೆ ಹಾನಿಯಾಗುವ ಅಂಶಗಳೇ ಇರುತ್ತವೆ. ಕೆಲವು ಇಂಜೆಕ್ಷನ್‌ಗಳಲ್ಲಿ ಯಾವ ಔಷಧಿಯೂ ಇರುವುದಿಲ್ಲ. ನಕಲಿ ಔಷಧಿಗಳ ಪ್ರಸಾರದಲ್ಲಿ ಅಂತರ್ಜಾಲ ಮಾರುಕಟ್ಟೆಯ ಪಾಲು ಹೆಚ್ಚು ಎನ್ನುವ ಮಾಹಿತಿಗಳೂ ಇವೆ. ನಕಲಿ ಮತ್ತು ಕಳಪೆ ಗುಣಮಟ್ಟದ ಔಷಧಿಗಳನ್ನು ನಿಯಂತ್ರಿಸುವ ಹೊಣೆ ಆಯಾ ರಾಜ್ಯಗಳ ಔಷಧಿ ನಿಯಂತ್ರಕ ಸಂಸ್ಥೆಗಳದ್ದಾಗಿರುತ್ತದೆ. ಆದರೆ ಈ ಔಷಧಿಗಳ ಬಹುರಾಷ್ಟ್ರೀಯ ಚಲಾವಣೆಯಿಂದ ಈ ನಿಯಂತ್ರಣವೂ ಕಷ್ಟಸಾಧ್ಯವಾಗಿದೆ. ಎಷ್ಟೋ ದೇಶಗಳಲ್ಲಿ ಔಷಧಿಗಳು ಕಳಪೆ ಎನ್ನುವುದನ್ನು ಕಂಡುಹಿಡಿಯುವ ಸೂಕ್ತ ವೈದ್ಯಕೀಯ ವ್ಯವಸ್ಥೆಯೂ ಜಾರಿಯಲ್ಲಿಲ್ಲ. ಇಂತಹ ಪತ್ತೆ ವಿಧಾನಗಳು ದುಬಾರಿಯಾಗಿರುವುದೂ ಬಡದೇಶಗಳಲ್ಲಿ ಸಮಸ್ಯೆಯನ್ನು ನಿಯಂತ್ರಣಾತೀತಗೊಳಿಸಿದೆ.

ಭಾರತದಲ್ಲೂ ಗುಣಮಟ್ಟ ನಿಯಂತ್ರಣದ ಕಳಪೆ ಕ್ರಮಗಳು ಬಹುದೊಡ್ಡ ಸಮಸ್ಯೆ. ಕೇಂದ್ರ ಔಷಧ ಗುಣಮಟ್ಟ ನಿಯಂತ್ರಣ ಸಂಸ್ಥೆಯ (ಸಿಡಿಎಸ್‌ಸಿ) ಪ್ರಕಾರ, ದೇಶದಲ್ಲಿ ಶೇಕಡಾ 5.1ರಷ್ಟು ಔಷಧಿಗಳು ಗುಣಮಟ್ಟ ಮಾನದಂಡಗಳನ್ನು ಪಾಲಿಸುವಲ್ಲಿ ವಿಫಲವಾಗಿವೆ. ಈ ಸಂಸ್ಥೆಯ ಗುಣಮಟ್ಟ ನಿಯಂತ್ರಣ ಮಾನದಂಡಗಳೂ ಉನ್ನತ ಮಟ್ಟದಲ್ಲಿ ಇಲ್ಲ ಎನ್ನಲಾಗುತ್ತಿದೆ. ಭಾರತದಲ್ಲಿ ಉತ್ಪಾದನೆಗೊಂಡ ಎಷ್ಟೋ ಔಷಧಿಗಳು ವಿದೇಶಗಳಲ್ಲಿ ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾಗುತ್ತಿವೆ. ಭಾರತವು ಔಷಧ ಉತ್ಪಾದನೆ ಮತ್ತು ಬಳಕೆಯಲ್ಲಿ ಜಾಗತಿಕವಾಗಿ ಮುಂಚೂಣಿಯಲ್ಲಿರುವ ಹಿನ್ನೆಲೆಯಲ್ಲಿ ಇಲ್ಲಿ ನಕಲಿ ಮತ್ತು ಕಳಪೆ ಔಷಧಗಳ ನಿಯಂತ್ರಣ ಅತ್ಯಂತ ತುರ್ತಾಗಿ ಮತ್ತು ಕಟ್ಟುನಿಟ್ಟಾಗಿ ಆಗಬೇಕಿದೆ. ನಿಯಮಾವಳಿಗಳ ಕಠಿಣ ಜಾರಿಗೆ ಸರ್ಕಾರ ಮುಂದಾಗಬೇಕಿದೆ.

**–ಬಿ.ಎಂ. ಹನೀಫ್**




ಈಶ್ವರ್